ಹುಬ್ಬಳ್ಳಿ ಧಾರವಾಡ ಅವಳಿ ಪಟ್ಟಣಗಳಿಗೆ ವಿತರಣಾ ವ್ಯವಸ್ಥೆಯನ್ನು ನವೀಕರಿಸುವ ಕೆಲಸವೂ ಕೂಡ ಮಂಜೂರಾಗಿದ್ದು ಈ ವರ್ಷದ ಸಾಲಿನಲ್ಲಿ ೧೦೦ ಲಕ್ಷ ರೂ. ಗಳ ಕಾರ್ಯಕ್ರಮವನ್ನು ಈ ಕೆಳ ಕಂಡಂತೆ ರೂಪಿಸಲಾಗಿದೆ.

೧. ಜಲಸಂಗ್ರಹಾಗಾರಗಳನ್ನು ಕಟ್ಟುವ ಕೆಲಸಗಳು.—

೧) ತಬೆಲ್ ಲ್ಯಾಂಡ್ ಬಳಿ–೩ ಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಸಂಗ್ರಹಾಗಾರದ ನಿರ್ಮಾಣ ಕೆಲಸ

೨) ನೆಹರೂ ನಗರದಲ್ಲಿ–ಮೇಲಿನಂತೆ

೩) ಹಳೇ ಹುಬ್ಬಳ್ಳಿಯಲ್ಲಿ–೧ ಲಕ್ಷ ಗ್ಯಾಲನ್–ಮೇಲಿನಂತೆ

೪) ಧಾರವಾಡಗಳಲ್ಲಿ–೨ ಲಕ್ಷ ಗ್ಯಾಲನ್–ಮೇಲಿನಂತೆ

೫) ಪ್ರಗತಿ ನಗರದಲ್ಲಿ–೧ ಲಕ್ಷ ಗ್ಯಾಲನ್–ಮೇಲಿನಂತೆ

೬) ಸಪ್ತಾಪುರದಲ್ಲಿ–೨ ಲಕ್ಷ ಗ್ಯಾಲನ್–ಮೇಲಿನಂತೆ

೭) ಮೂಲಮಡ್ಡಿಯಲ್ಲಿ–೨೫,೦೦೦ ಗ್ಯಾಲನ್–ಮೇಲಿನಂತೆ

೮) ಡಿ. ಸಿ. ಕಾಂಪೌಂಡಿನಲ್ಲಿ–೨೫,೦೦೦ ಗ್ಯಾಲನ್–ಮೇಲಿನಂತೆ

೯) ರಜತಗಿರಿಯಲ್ಲಿ–೨೫,೦೦೦ ಗ್ಯಾಲನ್–ಮೇಲಿನಂತೆ

೧೦) ನಗರ ಕಾರ್ಪೊರೇಷನ್–೧೦ ಲಕ್ಷ ಗ್ಯಾಲನ್–ಮೇಲಿನಂತೆ

೧೧) ಹಳೇ ಪಾರ್ಕ್ ಬಳಿ ಹುಬ್ಬಳ್ಳಿಯಲ್ಲಿ–೫ ಲಕ್ಷ ಗ್ಯಾಲನ್–ಮೇಲಿನಂತೆ

೨. ವಿತರಣಾ ವ್ಯವಸ್ಥೆಗೆ ಸಂಬಂಧಿಸಿದ ಫೀಡರ್ ಮೈನ್ ಕೆಲಸಗಳು (೮).

ಮೇಲೆ ತಿಳಿಸಿದ ಜಲಸಂಗ್ರಹಾಗಾರಗಳ ಕೆಲಸಗಳಿಗೇ ಗುತ್ತಿಗೆದಾರರನ್ನು ಗೊತ್ತುಪಡಿಸಲು ಟೆಂಡರ್‌ಗಳನ್ನು ಕರೆಯಲಾಗಿದ್ದು ಕೆಲಸಗಳು ತೀವ್ರಗತಿಯಲ್ಲಿ ಮುಗಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ತಯಾರಾಗುವ ಚಿತ್ರಗಳಿಗೆ ಮಾತ್ರ ಶೇ. ೫೦ ತೆರಿಗೆ ರಿಯಾಯಿತಿಯನ್ನು ಕೊಡುವ ಬಗ್ಗೆ.

ಶ್ರೀ ವೇದಾಂತ ಹೆಬ್ಬಾಗಿ,—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಚಲನಚಿತ್ರ ತಯಾರಿಕಾ ಉದ್ಯಮದಲ್ಲಿ ಸುಮಾರು ೫೦ ಸಾವಿರ ಕೆಲಸಗಾರರು ಇದ್ದಾರೆ. ಈ ಕೆಲಸಗಾರರ ಹಿತದೃಷ್ಟಿಯಿಂದ ಕರ್ನಾಟಕದಲ್ಲಿ ತಯಾರಾಗುವ ಕನ್ನಡ ಚಲನಚಿತ್ರಗಳಿಗೆ ಮಾತ್ರ ಶೇಕಡ ೫೦ ಪರ್ಸೆಂಟ್ ತೆರಿಗೆ ರಿಯಾಯಿತಿಯನ್ನು ಕೊಡಬೇಕೆಂದೂ ಕರ್ನಾಟಕದ ಹೊರಗಡೆ ತಯಾರಾಗುವ ಕನ್ನಡ ಚಿತ್ರಗಳಿಗೂ ತೆರಿಗೆ ರಿಯಾಯಿತಿ ಕೊಡುತ್ತಿರುವುದರಿಂದ ಕರ್ನಾಟಕದಲ್ಲಿ ಕನ್ನಡ ಚಿತ್ರ ಉದ್ಯಮಕ್ಕೆ ಧಕ್ಕೆ ಉಂಟಾಗುವುದೆಂದೂ ಆದುದರಿಂದ ಇದರ ಬಗ್ಗೆ ಸರ್ಕಾರ ಸ್ಪಷ್ಟವಾದ ದೃಢವಾದ ನೀತಿಯನ್ನು ಘೋಷಿಸಬೇಕೆಂದೂ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).— ಅಧ್ಯಕ್ಷರೇ, ಕನ್ನಡ, ಕೊಡವ, ಕೊಂಕಣಿ ಮತ್ತು ತುಳು ಭಾಷೆಗಳಲ್ಲಿಯ ಚಲನಚಿತ್ರಗಳನ್ನು ಕರ್ನಾಟಕದಲ್ಲಿ ಮತ್ತು ಕರ್ನಾಟಕದ ಹೊರಗೆ ತಯಾರಿಸಿದರೆ ಅವುಗಳಿಗೆ ಸಿಗಬೇಕಾದ ಮನರಂಜನಾ ತೆರಿಗೆ ವಿನಾಯಿತಿಯ ವಿಷಯದಲ್ಲಿ ಕರ್ನಾಟಕ ಮನರಂಜನೆ ಕಾಯಿದೆ, ೧೯೫೯ರ ನ್ನು ತಿದ್ದುಪಡಿ ಕಾಯಿದೆ ೨೨:೮೫ ರಲ್ಲಿ ೬-೯-೮೫ ರಂದು ಜಾರಿಗೆ ಬರುವಂತೆ ಪ್ರಕರಣ ೩(ಸಿ)(೧) ನ್ನು ಈ ಕೆಳಗೆ ಕಾಣಿಸಿದಂತೆ ತಿದ್ದುಪಡಿಸಲಾಗಿದೆ :

Section 3C (1).—

(a) In the case of a cinematograph show of a Kannada, Kodava, Konkani or Tulu film produced in the State of Karnataka the rates of entertainments tax payable shall be one half of the rates specified therein ;

(b) In the case of a cinematograph show of a Kannada, Kodava, Konkani or Tulu film produced outside the State of Karnataka the rates of entertainments tax payable shall be one half of the rates specified therein for a period of six months from the date of first release of such film in the State of Karnataka. So, however, as not to be beyond thirtyfirst December, 1986,

ಮೇಲೆ ಕಾಣಿಸಿದ ಉಪಬಂಧದ ಪ್ರಕಾರ ಕನ್ನಡ, ಕೊಡವ, ಕೊಂಕಣಿ ಮತ್ತು ತುಳು ಭಾಷೆಯಲ್ಲಿಯ ಚಲನಚಿತ್ರಗಳನ್ನು ಕರ್ನಾಟಕದಲ್ಲಿ ತಯಾರಿಸಿದರೆ ಮಾತ್ರ ಅವುಗಳಿಗೆ ಕೇಂದ್ರ ಶಿರ ಮನರಂಜನಾ ತೆರಿಗೆಯಿಂದ ವಿನಾಯಿತಿ ನೀಡಲು ಅವಕಾಶವಿದೆ. ಆದರೆ ಕರ್ನಾಟಕ ರಾಜ್ಯದ ಹೊರಗಡೆ ಮೇಲ್ಕಾಣಿಸಿದ ಭಾಷೆಗಳಲ್ಲಿ ತಯಾರಾದ ಚಲನಚಿತ್ರಗಳು ದಿನಾಂಕ ೩೧-೧೨-೮೬ರ ಮೊದಲು ಕರ್ನಾಟಕದಲ್ಲಿ ಮೊದಲನೇ ಪ್ರದರ್ಶನಕ್ಕೆ ಬಿಡುಗಡೆಯಾದರೆ ಅವುಗಳಿಗೆ ಆ ದಿನಾಂಕದಿಂದ ಆರು ತಿಂಗಳ ವರೆಗೆ ಮನರಂಜನಾ ತೆರಿಗೆಯಿಂದ ರಿಯಾಯಿತಿ ಲಭ್ಯವಿರುವುದು. ದಿನಾಂಕ ೩೧-೧೨-೮೬ ರ ನಂತರ ತಯಾರಾದ ಅಂಥ ಚಿತ್ರಗಳಿಗೆ ಈ ರಿಯಾಯಿತಿ ಸಿಗುವುದಿಲ್ಲ.

(10) ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿಗೆ ಒಂದು ಪ್ರತ್ಯೇಕವಾದ ನ್ಯಾಯಾಲಯವನ್ನು ಒದಗಿಸುವ ಬಗ್ಗೆ

ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).— ಸನ್ಮಾನ್ಯ ಸಭಾಧ್ಯಕ್ಷರೆ, ತಮಗೆ ತಿಳಿದಿರುವಂತೆ ಬಿಜಾಪುರ ಜಿಲ್ಲೆಯ ಬೀಳಗಿ ಒಂದು ತಾಲ್ಲೂಕು ಕೇಂದ್ರವಾಗಿದ್ದು ಸ್ವಾತಂತ್ರ್ಯ ಬಂದಾಗಿನಿಂದಲೂ ಬೀಳಗಿ ತಾಲ್ಲೂಕಿಗೆ ಒಂದು ಪ್ರತ್ಯೇಕವಾದ ನ್ಯಾಯಾಲಯ ಇಲ್ಲದೇ ಇರುವುದು ಅತ್ಯಂತ ನುರ್ದೈವದ ಸಂಗತಿ. ಸುಮಾರು ೬೬ ಹಳ್ಳಿಗಳನ್ನು ಒಳಗೊಂಡ ಬೀಳಗಿ ತಾಲ್ಲೂಕು ನ್ಯಾಯದಾನದಿಂದ ವಂಚಿತವಾಗಿದೆಯೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಸದ್ಯ ಬೀಳಗಿಯ ಜನರು ಕ್ರಿಮಿನಲ್ ವ್ಯಾಜ್ಯಗಳಿಗಾಗಿ ಬಾಗಲಕೋಟೆಗೆ ಹೋಗಬೇಕಾಗಿದ್ದು ಸಿವಿಲ್ ವ್ಯಾಜ್ಯಗಳಿಗಾಗಿ ಸುಮಾರು ೫೦ ಕಿ.ಮೀ. ದೂರದಲ್ಲಿರುವ ಜಮಖಂಡಿಗೆ ಹೋಗಬೇಕಾಗಿದೆ. ಈ ಇಬ್ಬಗೆಯ ಓಡಾಟದಿಂದಾಗಿ ಕಕ್ಷಿದಾರರು ಹಾಗೂ ವಕೀಲರು ಬಹಳ ರೀತಿಯಲ್ಲಿ ತೊಂದರೆಗೀಡಾಗಿದ್ದಾರೆ.

ಕಳೆದ ವಿಧಾನಮಂಡಲದ ಅಧಿವೇಶನದಲ್ಲಿ ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಕಾನೂನು ಸಚಿವರು ಬೀಳಗಿಗೆ ಒಂದು ನ್ಯಾಯಾಲಯವನ್ನು ಒದಗಿಸಿ ಕೊಡುವುದಾಗಿ ಹೇಳಿದ್ದರು. ಈ ನ್ಯಾಯಾಲಯದ ಸ್ಥಾಪನೆಗಾಗಿ ಆಗ್ರಹಪಡಿಸಿ ಬಾಗಲಕೋಟೆ ಹಾಗೂ ಜಮಖಂಡಿಗಳ ವಕೀಲ ಸಂಘದವರು ಸರ್ಕಾರಕ್ಕೆ ಈಗಾಗಲೇ ಮನವಿ ಸಲ್ಲಿಸಿದ್ದು ವಿಧಾನಮಂಡಲದಲ್ಲಿ ಈ ಕುರಿತು ನಾನು ಎರಡು ಮೂರು ಸಲ ಪ್ರಸ್ತಾಪಿಸಿದ್ದೇನು. ನ್ಯಾಯಾಲಯದ ಸ್ಥಾಪನೆ ಕುರಿತ ಬಿಜಾಪುರ ಜಿಲ್ಲಾ ನ್ಯಾಯಾಧೀಶರು ಬೀಳಗಿಗೆ ಸಂದರ್ಶನ ನೀಡಿ ಹಲವಾರು ಸ್ಥಳಗಳನ್ನು ನೋಡಿದ್ದುಂಟು. ಅನೇಕ ಸಂಘಸಂಸ್ಥೆಗಳು ತಾತ್ಕಾಲಿಕವಾಗಿ ನ್ಯಾಯಾಲಯ ತೆರೆಯಲು ಕಟ್ಟಡ ಸೌಕರ್ಯವನ್ನು ಒದಗಿಸಲು ಮುಂದಾಗಿದೆ. ಬೀಳಗಿಯಲ್ಲಿ ನ್ಯಾಯಾಲಯ ಸ್ಥಾಪಿಸಲು ಕರ್ನಾಟಕದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ವರದಿ ಕೂಡ ಸರ್ಕಾರದ ಕೈ ಸೇರಿದೆ ಎಂದು ವಿಶ್ವಾಸನೀಯ ಮೂಲಗಳಿಂದ ತಿಳಿದು ಬಂದಿದೆ. ಬೀಳಗಿ ಜನರು ಜಮಖಂಡಿಗೆ ಹೋಗಲು ಸರಿಯಾದ ವಾಹನ ಸೌಕರ್ಯಗಳಿಲ್ಲ. ಒಂದು ವಿಶಾಲವಾದ ಜನ ಸಮೂಹವನ್ನು ಸುಮಾರು ನಾಲ್ಕು ದಶಕಗಳವರೆಗೆ ನ್ಯಾಯದಾನದಿಂದ ದೂರವಿಡುವುದು ಸರಿಯಾದ